

## ಜೋಳದ ಮನೆ

ಅಬ್ಬಾ! ಈ ಮನೆ ಕಟ್ಟಲು ಕಬ್ಬಿಣ, ಸಿಮೆಂಟ್, ನೀರು ಏನೂ ಬೇಡ! ಹಾವೇರಿಯಿಂದ ಶಿರಸಿಗೆ ಹೋಗುವ ಮಾರ್ಗದಲ್ಲಿ ಆಲದಕಟ್ಟಿ ಟೋಲ್ ಪ್ಲಾಜಾ ಬಳಿ ಬೀಜದ ಕಂಪನಿಯವರು ಕೇವಲ ಗೋವಿನ (ಮೆಕ್ಕೆ) ಜೋಳದ ತೆನೆಗಳಿಂದ ತಯಾರಿಸಿರುವ ಪ್ರಾತ್ಯಕ್ಷಿಕೆಯಿದು. ಈ ರಸ್ತೆಯಲ್ಲಿ ಸಾಗುವ ಪ್ರತಿ ವಾಹನಗಳು ನಿಂತು ಒಮ್ಮೆ ಕಣ್ತುಂಬಿಕೊಂಡು ಹೋಗುತ್ತವೆ.

—ಕೆ. ಆದಿತ್ಯ ಹೆಬ್ಬಾರ್ ಹರಪನಹಳ್ಳಿ

## ಕಲಾ ದ್ವಾರ

ಸುಮಾರು 90 ವರ್ಷಗಳ ಹಿಂದೆ (1931) ರಾಮಮೂರ್ತಿ ಉಪಾಧ್ಯಾಯರು ಕಟ್ಟಿದ ಮನೆಯ ಪಡಸಾಲೆಯ ದ್ವಾರದ ಕುಸುರಿ ಕಲೆ ಅಮೋಘವಾಗಿದೆ. ಹಲಸಿನ ಮರವನ್ನು ಬಳಸಿ ಕೆತ್ತನೆ ಮಾಡಲಾಗಿದೆ. ಬಾಗಿಲಿನ ಮೇಲಿನ ಸಾಲಿನ ಮಧ್ಯೆ ಗಜಲಕ್ಷ್ಮಿ, ಎರಡೂ ಪಕ್ಕದಲ್ಲಿ ಆನೆಗಳು ಸೊಂಡಿಲಿನಲ್ಲಿ ಕಲಶವನ್ನು ಇಟ್ಟುಕೊಂಡ ಹಾಗೆ. ಅದರ ಕೆಳಗಿನ ಸಾಲಿನಲ್ಲಿ ಮಧ್ಯೆ ಕುಸುರಿ ಕೆತ್ತನೆಯ ಚಕ್ರ, ಅದರ ಸುತ್ತ ಹೂವು– ಬಳ್ಳಿಗಳ ಕೆತ್ತನೆ.

ದ್ವಾರದ ಎರಡೂ ಬದಿಗಳಲ್ಲೂ ಹೂವು ಬಳ್ಳಿಗಳ, ಮಣಿಗಳ ಪೋಣಿಸಿದಂತೆ ಸಾಲು, ನವಿಲಿನ ವೈಯಾರದ ಕೆತ್ತನೆ. ಕೆಳಗಿನ ಸಾಲಿನಲ್ಲೂ ಚಕ್ರಗಳ ಸೂಕ್ಷ್ಮ ಕುಸುರಿಯ ಕಲೆ ಎಲ್ಲ ನೋಡಿದರೆ ಶಿಲ್ಪಿಯ ಕೈ ಚಳಕ ಮೆಚ್ಚಲೇಬೇಕು. ಒಟ್ಟಿನಲ್ಲಿ ದ್ವಾರವು ಸುಂದರ, ಸೂಕ್ಷ್ಮ ಕಲಾತ್ಮಕತೆಯಿಂದ ಕೂಡಿದೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕು ಮೊಳಹಳ್ಳಿ ಗ್ರಾಮದ ಬಳಿಯ ಕಂಚಾರ್ಥಿ ರಾಜಶೇಖರ ಉಪಾಧ್ಯಯರ ಮನೆಯಲ್ಲಿ ಈ ಕಲೆಯ ದ್ವಾರವನ್ನು ಕಾಣಬಹುದು.

—ಶುಭಾ ದಿವಾಕರ್, ಬೆಂಗಳೂರು





## ಮರಗಟ್ಟಿದ ಹೃದಯ!

ಪ್ರಕೃತಿಯನ್ನು ನಾವು ಅರ್ಥ ಮಾಡಿಕೊಂಡರೆ ಪ್ರಕೃತಿ ನಮ್ಮ ಜೊತೆ ಸಂವಾದಕ್ಕೆ ಅಣಿಯಾಗುತ್ತದೆ. ಕವಿಗಳು ಪ್ರಕೃತಿ ಕುರಿತಾಗಿ ಅನೇಕ ಕವಿತೆಗಳನ್ನು ಬರೆದಿದ್ದಾರೆ. ಪ್ರಕೃತಿ ಸೌಂದರ್ಯವೇ ಅಂಥಹದ್ದು ಪ್ರಕೃತಿಯೊಳಗಿನ ಪ್ರತಿಯೊಂದು ವಸ್ತುಗಳು ವಿಭಿನ್ನವಾಗಿ ಕಾಣುತ್ತವೆ.

ಗಂಗಾವತಿಯ ಚಾರಣ ಬಳಗದಿಂದ ಚಾರಣ ಹೋಗಿದ್ದಾಗ ಒಣಗಿದ ಮರದ ಬೇರು ಕಣ್ಣಿಗೆ ಬಿತ್ತು ನೋಡಲು ಮಾನವನ ಹೃದಯದಂತೆ ಕಂಡು ಬಂತು. ಅದನ್ನು ಕೈಗೆತ್ತಿಕೊಂಡು ಮುನ್ನಡೆದಾಗ ನನಗೊಂದು ಕಥೆ ಹೇಳಿತು 'ನನಗೂ ನಿಮ್ಮ ಹಾಗೆ ಬದುಕುವ ಆಸೆ ಆದರೆ ನಿಮ್ಮ ದುರಾಸೆಗೆ ನಮ್ಮನ್ನು ಬಲಿಕೊಟ್ಟು ಪಶ್ಚಾತ್ತಾಪ ಪಡಬೇಡಿ ಪ್ರಕೃತಿಯನ್ನು ಕಾಪಾಡಿ' ಎಂದು!

—ಮೈಲಾರಪ್ಪ ಬೂದಿಹಾಳ ಮುಗಿಲಹಕ್ಕಿ, ಕಣವಿ